ಟೆಂಪೋದಲ್ಲಿ ಹತ್ತಿಸಿಕೊಂಡಿದ್ದಳು. ಟೆಂಪೋ ವೇಗವಾಗಿ ಚಲಿಸುತ್ತಿತ್ತು, ಆದರೆ ಭೀಮವ್ವಳ ಎದೆ ಪ್ರಶಾಂತವಾಗಿತ್ತು. ಕಚ್ಚಿಕೊಂಡ ಬದುಕನ್ನು ಅಷ್ಟೊಂದು ಸಲೀಸಾಗಿ ಕೈ ಚೆಲ್ಲುವಂತಿರಲಿಲ್ಲ, ಎಲ್ಲಿಗೆ ಹೋಗಿ ಏನು ಮಾಡುವುದು? ದಿಲ್‌ರುಬಾ, ಸಲೀಂನ ತೆಕ್ಕೆಯಲ್ಲಿ ಬಿದ್ದು ಹೊರಳಾಡುತ್ತಿದ್ದಳು, ಅವನು ಅವಳಿಗೆ ಬದುಕಿನ ನಶೆಯನ್ನಂತೂ ಧಾರೆಯೆರೆದುಬಿಟ್ಟಂತೆ ಕಾಣುತ್ತಿತ್ತು, ನೆಚ್ಚಿಕೆಯಿರಲಿಲ್ಲ. ಬೀಮವ್ವಳಿಗೆ ಅನುಕೂಲವಾಗುವಂತೆ ನಿಲ್ದಾಣವೊಂದರಲ್ಲಿ ಬಿಟ್ಟು, ಅವರಿಬ್ಬರು ಹೈದರಾಬಾದಿನ ಕಡೆ ಮರೆಯಾಗಿಹೋದರು, ಅವಳ ಚಾಕಚಕ್ಯತೆ ಮತ್ತು ಬದುಕುವ ಛಲ ಇವಳನ್ನು ನಿಬ್ಬೆರಗಾಗಿಸಿತು.

* * *

ಅಂದು ಕುಳಿತಂತೆ ಚನ್ನವ್ವ ಕುಳಿತಿದ್ದಳು, ಅವಳ ಮಡಿಲಿನಲ್ಲಿ ರೋದಿಸುತ್ತಿರುವ ಭೀಮವ್ವ. ಯಲ್ಲಾಲಿಂಗ ನಗಲೂ ಆಗದೆ, ದುಃಖಿಸಲೂ ಆಗದೆ ಪರಿತಪಿಸುತ್ತಿದ್ದ, ಸಾಬಣ್ಣನ ಮುಖಾಮುಖಿಗೆ ಎದುರು ನೋಡುತ್ತಿದ್ದಂತಿತ್ತು. ಭೀಮವ್ವ ನುಡಿದ ಕಥೆಯನ್ನು ಚೌಡಿಕೆ ಪದವಾಗಿ ಕಟ್ಟುವ ಕೌಶಲ ಚನ್ನವ್ವನೊಳಗೆ ಮಡುಗಟ್ಟತೊಡಗಿತು. ನೊಂದ ಹುಡುಗಿಯನ್ನು ನೋಯಿಸಲಿಲ್ಲ, ಮತ್ತೆ ಮತ್ತೆ ಬೇಯಿಸಲಿಲ್ಲ, ನಿಂದಿಸಲಿಲ್ಲ. ನಟ್ಟನಡುರಾತ್ರಿ ಬಂದು ಮನೆ ಬಾಗಿಲ ಮುಂದೆ ನಿಂತಾಗ ಯಲ್ಲಾಲಿಂಗ ದೆವ್ವ ನೋಡಿದಂತೆ ಭೀಮವ್ವಳನ್ನು ಕಂಡು ಹೌಹಾರಿದ್ದ. ಘಟಪ್ರಭಾ ನದಿಯಲ್ಲಿ ಮುಳುಗಿ ಸತ್ತುಹೋದಳೆಂದು ಭಾವಿಸಿ, ಇವಳ ಅಂತ್ಯಕ್ರಿಯೆ ಮಾಡಿ ಮುಗಿಸಿದ್ದರು. ತಟ್ಟಾಡಿಹೋಗಿದ್ದ, ದರದರನೆ ಒಳಗೆ ನುಗ್ಗಿ ನಿದ್ರಿಸುತ್ತಿದ್ದ ಚನ್ನವ್ವಳನ್ನು ಏಕಾಏಕಿ ಅಲುಗಿಸಿ ಆಚೆ ಎಳೆದುಕೊಂಡು ಬಂದಿದ್ದ ಯಲ್ಲಾಲಿಂಗ, ಎದೆ ಸೀಳಿಕೊಂಡು ಕುಸಿಯುವುದಷ್ಟೇ ಬಾಕಿ. ಭೀಮವ್ವಳ ಶೋಕಿ, ಮೈ ಉಡುಪು, ಅವಳ ತುಟಿಗಳನ್ನು ನೋಡಿ ಬೆವೆತುಹೋಗಿದ್ದಳು, ಬಾಗಲಕೋಟೆಯ ರಸ್ತೆಬದಿ ನಿಲ್ಲುವ ಹೆಣ್ಣುಗಳಂತೆಯೇ ಕಂಡಿದ್ದಳು. ಹೌದು, ಇವರಿಬ್ಬರಿಗೆ ಇದು ಹೊಳೆಯಲೇ ಇಲ್ಲ, ಭೀಮವ್ವ ಕಾಣೆಯಾದಾಗಿನಿಂದ ಸಾಬಣ್ಣ ಇತ್ತ ಸುಳಿಯಲೇ ಇಲ್ಲ. ಬಾಂಬೆಯಲ್ಲಿ ಟ್ರಕ್ ಓಡಿಸುತ್ತಿರುವವನೆಂದು ಯಾರೋ ನೀಡಿದ ಸುದ್ದಿ, ಅಷ್ಟೇ. ಸಂದಿಗ್ಧತೆ, ಇವಳನ್ನು ನೋಡಿದರೆ ಊರಿನ ಜನ ಏನಂದಾರು, ಇವಳ ಹಾವಭಾವ, ಮಾತು ಎಲ್ಲವೂ ವಿಲಕ್ಷಣ. ಈ ಸಂದರ್ಭ ಸ್ಥಿತಿಯನ್ನೆದುರಿಸುವುದು ಅಸಾಧ್ಯ.

* * *

ಬಾಗಲಕೋಟೆ ಕಡೆ ಕುಗ್ರಾಮವೊಂದಕ್ಕೆ ಚೌಡಿಕೆ ಮೇಳ ನಡೆಸಲು ಚನ್ನವ್ವ ಹೋಗಿದ್ದಾಗ ಪರಿಚಿತನಾದ ತರುಣ ಮಹಾಂತೇಶ, ಹಾಲು ಗಾಡಿ ಓಡಿಸುವವನು. ತಮಾಷೆಗೆ ಹೇಳಿದ್ದನೇನೋ, 'ನಿನ್ನ ಮಗಳನ್ನ ಕೊಡಂಗಿದ್ರೆ ನನಗೇ ಕೊಡವ್ವೋ...' ಅಂತ. ಅದನ್ನೇ ನೆಚ್ಚಿಕೊಂಡು ಬೆಳಕರಿಯುವ ಮುನ್ನ ಭೀಮವ್ವಳನ್ನು ಕರೆದುಕೊಂಡು ಅವನಲ್ಲಿಗೆ ಬಂದುಬಿಟ್ಟರು. ಅವನೇ ಏಕೆ ಬೇಕಾಗಿತ್ತು, ಗೊತ್ತಿಲ್ಲ. ಚನ್ನವ್ವಳಂತೂ ನಿರ್ಧರಿಸಿಬಿಟ್ಟಿದ್ದಳು, ಹಾಲು ಸಾಗಿಸುವ ಟೆಂಪೋ ತಂದು ನಿಲ್ಲಿಸುತ್ತಿದ್ದಂತೆ ಚೌಡಿಕೆ ಚನ್ನವ್ವಳ ಬಳಗವನ್ನು ಕಂಡು ಗಾಬರಿಗೊಂಡ. ಅವನಿಗೆ ಹಿಂದು ಮುಂದೆ ಯಾರೂ ಇಲ್ಲ, ನಕ್ಕರೆ ಅವನೇ ನಗಬೇಕು, ಅತ್ತರೂ ಅವನಿಗವನೇ ಅತ್ತು ಸಾಯಬೇಕು. ಈ ಹಿನ್ನೆಲೆಯಲ್ಲೇ ಇವನನ್ನು ಬಗೆದು ನೋಡಿದ್ದಳು ಚನ್ನವ್ವ. ಮಹಾಂತೇಶನಿಗೆ ಇನ್ನಿಲ್ಲದ ಚಡಪಡಿಕೆ, ತಳಮಳ. ಅವನ ಸನ್ನಿಧಿಯಲ್ಲಿ ಭೀಮವ್ವ ಹೇಗೆ ಅವತರಿಸಿದ್ದಳು, ಅವಳ ಕಣ್ಣುಗಳಿಗೆ ಎದುರುಗೊಳ್ಳಲಾಗದೆ ಅವರಿಬ್ಬರ ಒಳ ಸಂಘರ್ಷದಲ್ಲಿ ಬೇಯುತ್ತಿದ್ದ. ಊರಿನಲ್ಲಿ ಪೋಲಿಪುಂಡರ ಕಾಟ, ಭೀಮವ್ವಳಿಗೆ ಉಳಿಗಾಲವಿಲ್ಲ ಅಂತೇನೋ ಚನ್ನವ್ವ ಮತ್ತು ಯಲ್ಲಾಲಿಂಗರಿಂದ ಪೊಳ್ಳು ಸಕಾರಣಗಳು ಕುದಿಯುತ್ತಿದ್ದವು. ಅನಾಥನಾದರೂ ಸಾಕಿ ಸಲಹಿದವರು ಇಲ್ಲದಿಲ್ಲ, ಅತ್ಯಂತ ಆತುರದ ಈ ಸಂಬಂಧಕ್ಕೆ ಅವರು ಸಂದೇಹಿಸಿ ನೋಡಿದರು. ಮಹಾಂತೇಶನ ನಿರ್ಧಾರದ ಮೇಲೆ ಕಡೆಗೂ ಅವರು ಒಪ್ಪಿಕೊಂಡರು. ಒಂದು ವಾರದೊಳಗೆ ಊರಿನಲ್ಲಿ ಹೇಗೆ ಲಗ್ನ ಕಾರ್ಯ ಮಾಡುತ್ತಾರೋ ಹಾಗೆಯೇ ನಡೆದುಹೋಯಿತು. ಊರಿನಿಂದ ಬರುವಾಗ ಚೌಡಿಕೆ ಮೇಳ ನಡೆಸಿ, ಕೂಲಿನಾಲಿ ಮಾಡಿ ಗಳಿಸಿದ ಹಣವನ್ನೆಲ್ಲ ಚನ್ನವ್ವ ಜೊತೆಗೂಡಿಸಿಯೇ ತಂದಿದ್ದಳಾದ್ದರಿಂದ ಗುಡ್ಡದ ಮೇಲೆ ಐವತ್ತು ಜನಕ್ಕೆ ಊಟ ಹಾಕಿಸಿ, ಇಬ್ಬರಿಗೆ ಯಲ್ಲಮ್ಮನ ಆಶೀರ್ವಾದ ಕೊಡಿಸಿ ಬಾಳ್ವೆಗೆ ಅನುವು ಮಾಡಿಕೊಟ್ಟರು.

* * *